ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ದಯವಿಮಾಡಿ ಎಲ್ಲರೂ ಕುಳಿತುಕೊಳ್ಳಿ ಇನ್ನೂ ೧೧ ಪ್ರಶ್ನೆಗಳು ಇವೆ. ನಾನು ಎಲ್ಲರಿಗೂ ಅವಕಾಶ ಮಾಡಿ ಕೊಡಬೇಕಾಗಿದೆ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ ಕನ್ನಡ ಚಲನಚಿತ್ರದಲ್ಲಿ ಅನೇಕ ಜನ ವಿದ್ವಾಂಸರು, ಅನೇಕ ಜನ ಸಾಹಿತಿಗಳು.....

(ಗೊಂದಲ)

ಅಧ್ಯಕ್ಷರು.—ದಯವಿಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಕೌಜಲಗಿಯವರೇ ತಾವು ಪ್ರಶ್ನೆ ಕೇಳಿ.

ಸವದತ್ತಿ ತಾಲ್ಲೂಕಿನ ಮುರಗೋಡದಲ್ಲಿ ಬಸ್ಸು ನಿಲ್ದಾಣ

೧೪೭ (೪೦೬) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂಧೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕು ಮುರುಗೋಡು ಗ್ರಾಮದಲ್ಲಿ ಬಸ್ ನಿಲ್ದಾಣ ಕಟ್ಟಲು ಎಷ್ಟು ಹಣ ಮಂಜೂರು ಮಾಡಲಾಗಿದೆ. ೮೬-೮೭?

ಆ) ಬಸ್ ನಿಲ್ದಾಣ ಕಟ್ಟುವ ಕೆಲಸ ಪ್ರಾರಂಭವಾಗಿದೆಯೆ ?

ಇ) ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ?

ಈ) ಅದನ್ನು ಪೂರ್ಣಗೊಳಿಸಲು ಇನ್ನು ಎಷ್ಟು ದಿವಸಗಳು ಬೇಕು ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂಧೀಖಾನೆ ರಾಜ್ಯ ಮಂತ್ರಿಗಳು).—

ಅ) ರೂ. ೬.೦೦ ಲಕ್ಷ

ಆ) ಇಲ್ಲ.

ಇ) ಮತ್ತು ಈ) ಉದ್ಭವಿಸುವುದಿಲ್ಲ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿರುವಂತೆ ೧೯೮೬-೮೭ನೇ ಸಾಲಿನಲ್ಲಿ ೬ ಲಕ್ಷ ರೂಪಾಯಿಗಳ ಹಣವನ್ನು ಒದಗಿಸಿದ್ದರೂ ಸಹ ಇದುವರೆವಿಗೂ ಕೆಲಸ ಪ್ರಾರಂಭಿಸಿಲ್ಲ ಮತ್ತು ಬಸ್ಸು ನಿಲ್ದಾಣವನ್ನು ಕಟ್ಟುವ ಸಲುವಾಗಿ ಸವದತ್ತಿ ತಾಲ್ಲೂಕು ಮುರುಗೋಡು ಗ್ರಾಮದಲ್ಲಿ ಸುಮಾರು ೯ ಗುಂಟೆ ಜಮೀನನ್ನು ಸಹ ಕೆ.ಎಸ್.ಆರ್.ಟಿ.ಸಿ ಪಕ್ಕೆ ತೆಗೆದುಕೊಂಡಿದ್ದಾರೆ. ಆದರೂ ಸಹ ಇದುವರೆವಿಗೂ ಇನ್ನೂ ಏತಕ್ಕೆ ಬಸ್ಸು ನಿಲ್ದಾಣವನ್ನು ಕಟ್ಟಿಲ್ಲ ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ಹಾಗೆ ೧೯೮೬-೮೭ನೇ ಸಾಲಿನಲ್ಲಿ ೬ ಲಕ್ಷ ರೂಪಾಯಿಗಳ ಹಣವನ್ನು ಇಟ್ಟಿರುವುದು ನಿಜ. ಕೆ.ಎಸ್.ಆರ್.ಟಿ.ಸಿ.ಗೆ ೯ ಗುಂಟೆ ಜಮೀನನ್ನು ಸಹ ವಶಪಡಿಸಿಕೊಂಡಿರುವುದು ನಿಜ. ಆದರೆ ಅಲ್ಲಿನ ಸ್ಥಳೀಯ ಶಾಸಕರ ಒತ್ತಡದ ಮೇರೆಗೆ ಮತ್ತು ಸಾರ್ವಜನಿಕರ ಒತ್ತಡದ ಮೇರೆಗೆ ಇನ್ನೂ ದೊಡ್ಡ ಬಸ್ಸು ನಿಲ್ದಾಣವನ್ನು ಕಟ್ಟುವ ಸಲುವಾಗಿ ಒಂದು ಎಕರೆ ಜಮೀನು ಬೇಕಾಗುತ್ತದೆ. ಮಾನ್ಯ ಸದಸ್ಯರು ಒಂದು ಎಕರೆ ಜಮೀನನ್ನು ಕೆ.ಎಸ್.ಆರ್.ಟಿ.ಸಿ.ಗೆ ಕೊಡಿಸಿಕೊಡುವುದಾದರೆ ಇನ್ನು ೧೦-೧೫ ದಿವಸಗಳೊಳಗೆ ಆ ಕೆಲಸವನ್ನು ಪ್ರಾರಂಭಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ ಅಲ್ಲಿನ ಜನ ಒಂದು ಎಕರೆ ಜಮೀನನ್ನು ಕೊಡುವುದಕ್ಕೆ ತಯಾರಾಗಿದ್ದಾರೆ. ಆದ್ದರಿಂದ ಕೂಡಲೇ ಮಾನ್ಯ ಮಂತ್ರಿಗಳು ಈ ಕೆಲಸವನ್ನು ಪ್ರಾರಂಭಿಸುತ್ತಾರೆಯೇ ?

ಶ್ರೀ ವೀರಣ್ಣ.—ಆಗಲಿ.